# ಶ್ರೇಷ್ಠ ಯುವ ಕೃಷಿಕ



ಶ್ರೀ ಪ್ರಶಾಂತಗೌಡ ಸ. ಸಂಗನಗೌಡ್ರ
ಸಾ : ಬೆನಕನಕೊಂಡ
ತಾ : ರಾಣೆಬೆನ್ನೂರು
ಜಿ : ಹಾವೇರಿ
☎: 7829053949

## ವಿಶೇಷ ಸಾಧನೆಗಳು

ರಾಣೇಬೆನ್ನೂರು ತಾಲ್ಲೂಕಿನ ಬೆನಕನಕೊಂಡ ಗ್ರಾಮದವರಾದ ಶ್ರೀ ಪ್ರಶಾಂತಗೌಡ ಸಂಗನಗೌಡ ಸಂಗನಗೌಡ್ರರವರು ತಮ್ಮ ಅತಿ ಚಿಕ್ಕ ವಯಸ್ಸಿನಿಂದಲೇ ಕೃಷಿಯನ್ನು ತಮ್ಮ ಜೀವನ ಪದ್ಧತಿಯನ್ನಾಗಿ ರೂಢಿಸಿಕೊಂಡು ಬಂದಿದ್ದಾರೆ. ಇವರು ತಮ್ಮ 10 ಎಕರೆ ಜಮೀನಿನೊಂದಿಗೆ ಲಾವಣಿ ಆಧಾರದ ಮೇಲೆ 10 ಎಕರೆ ಜಮೀನಿನಲ್ಲಿ ಕೃಷಿ ಮಾಡುತ್ತಿದ್ದು ಹತ್ತಿ, ಅವರೆ, ಹೆಸರು, ಅಲಸಂದೆ, ಉದ್ದು, ಎಳ್ಳಿನಂತಹ ಬೆಳೆಗಳೊಂದಿಗೆ ತರಕಾರಿ ಬೆಳೆಗಳಾದ ಈರುಳ್ಳಿ, ಕೊತ್ತಂಬರಿ ಹಾಗೂ ಮೆಂತೆಯನ್ನು ಬೆಳೆಯುತ್ತಿದ್ದಾರೆ. ಕೃಷಿಯೊಂದಿಗೆ ಜೇನು ಸಾಕಾಣಿಕೆ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ ಇವರು ಜೇನು ಸಾಕಾಣಿಕೆಯನ್ನು ತಮ್ಮ ಉಪ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಜೇನು ಸಾಕಾಣೆಯ ಬಗ್ಗೆ ಇತರರಿಗೆ ಮಾಹಿತಿ ನೀಡುವುದು ಇವರ ನೆಚ್ಚಿನ ಹವ್ಯಾಸ, ಮಾಹಿತಿ ಹಾಗೂ ಜ್ಞಾನಕ್ಕಾಗಿ ಕೃಷಿ ಸಂಬಂಧಿತ ಪತ್ರಿಕೆಗಳು ಹಾಗು ಸಂಸ್ಥೆಗಳ ಜೊತೆ ಸದಾ ಸಂಪರ್ಕ ಹೊಂದಿದ್ದಾರೆ.





